ಜೋತಯ್ಯ?'' ಎಂದಿದ್ದಕ್ಕೆ ಸರಿಯಾಗಿ ಉತ್ತರಿಸದೆ ಸುಮ್ಮನೆ ನಗುತ್ತಾ ಹಾರಿಕೆಯ ಉತ್ತರ ಕೊಟ್ಟು ತಕ್ಷಣ ಅಲ್ಲಿಂದ ಜಾಗ ಖಾಲಿಮಾಡಿಬಿಟ್ಟಿದ್ದ ಜೋಗಪ್ಪ.

"ನೀ ಒಳ್ಳೆ ಮನ್ಷ ಮಾರಾಯಾ, ಇನ್ನೊಂದ್ಸಲ್ಪ ಹೊತ್ತು ಜಬರ್ದಸ್ತ್ ಮಾಡಿದ್ದಿದ್ರೆ ಗುಟ್ಟೆಲ್ಲಾ ಹೊರ್ಗೆ ಬಂದಿರೋದು. ಒಳ್ಳೇ ಜೋಗಪ್ಪಂಗೆ ಜೋತ್ಕಂಡು ಜೋತಯ್ಯ ಹೇಳಿ ಕರ್ಕೊಂಡು ತಲೆ ಮೇಲೇ ಕೂರಿಸ್ಕೊಂಡಿದೀಯಾ ಬಿಡು" ಎಂದು ಅಸಮಾಧಾನದಲ್ಲೇ ಅಪ್ಪ ಒಳ ಹೋದ. ಆತನ ಬುದ್ಧಿ ಗೊತ್ತಿದ್ದರಿಂದ ಮರುಮಾತನಾಡದೇ ಸುಮ್ಮನಾಗಿದ್ದೆ. ಅಪ್ಪನಿಗೆ ನಾನು ಜೋಗಪ್ಪನನ್ನು ಹಚ್ಚಿಕೊಂಡು ಸಲಿಗೆ ನೀಡುತ್ತಿದ್ದುದು ಅಷ್ಟು ಸರಿ ಬಂದಿರಲಿಲ್ಲ. ಅದರಲ್ಲೂ ಎಲ್ಲರ ಪಾಲಿಗೆ ಜೋಗಪ್ಪನಾಗಿದ್ದವನನ್ನು ನಾನು ಮಾತ್ರ ವಿಶೇಷವಾಗಿ ಜೋತಯ್ಯ ಎಂದು ಕರೆಯುವುದೂ ಅವನಿಗೆ ತುಸು ಕಿರಿಕಿರಿಯೇ ಆಗುತ್ತಿತ್ತು.

ಇಷ್ಟಕ್ಕೂ ಈತ ಜೋಗಪ್ಪನಿಂದ ಜೋತಯ್ಯ ಆಗಿದ್ದರ ಹಿಂದೆಯೂ ಒಂದು ಕಥೆಯಿದೆ!

ಚಿಕ್ಕವರಿದ್ದಾಗ ಜೋಗಪ್ಪ ಶಾಲೆಗೆ ಹೋಗುವ ದಾರಿಯಲ್ಲಿ ಸಿಗುತ್ತಿದ್ದ ಅಷ್ಟೂ ಮರವನ್ನು ಹತ್ತಿ, ಅದರ ಗಟ್ಟಿಮುಟ್ಟಾದ ಗೆಲ್ಲನ್ನು ಆಯ್ದುಕೊಂಡು ಸಲೀಸಾಗಿ ಜೋತಾಡುತ್ತಿದ್ದ. ನನಗೆ ಅದು ಬಹಳ ಮೋಜೆನಿಸುತ್ತಿತ್ತು. ಅವನ ಹಾಗೆ ನಾನೂ ಮಾಡಲು ಹೋಗಿ, ಆಯತಪ್ಪಿ ಬಿದ್ದು ಎರಡು ಸಲ ಸೊಂಟಕ್ಕೆ ಪೆಟ್ಟು ಮಾಡಿಕೊಂಡು, ಆಯಿಯಿಂದಲೂ ಸಮಾ ಲತ್ತೆ ತಿಂದಮೇಲೆ ತೆಪ್ಪಗಾಗಿಬಿಟ್ಟಿದ್ದೆ. ಆದರೆ ಜೋಗಪ್ಪನ ಜೋತಾಡುವಿಕೆ ಮಾತ್ರ ಯಾವುದೇ ಅಡೆತಡೆಯಿಲ್ಲದೇ ಸಾಗಿತ್ತು.

"ಅನಂತ, ನೋಡು ಈ ಪೇರಳೆ ಮರದ ಗೆಲ್ಲಿಗೆ ಜೋತಾಡೋದು ಅಷ್ಟು ಚೊಲೋ ಅನ್ಸದಿಲ್ಲಪ್ಪ. ಇದಕ್ಕಿಂತ ಈಶಾಡಿ ಮಾವಿನ್ಮರಕ್ಕೆ ಜೋತಾಕದೇ ಚೊಲೋ ಆಯ್ತದೆ. ಮಾವಿನ್ಕಾಯಿ ಕೈಗೆ ಸಿಕ್ರೆ ಉಪ್ಪು, ಮೆಣ್ಸು ಹಾಕ್ಕಂಡು ತಿಂದ, ಹಣ್ಣಾದ್ರಂತೂ ಸಮಾ ಹೊಡ್ದ. ಪೇರ್ಳೆ ಕಾಯಿ ಹೀಚಾದ್ರೆ ಎಂತ ಮಜಾ ಬತ್ತದೆ? ಅಕಾ, ಅಲ್ನೋಡು ಆಲ್ದ ಮರಕ್ಕೆ ಎಷ್ಟೆಲ್ಲಾ ಬಿಳಲು ಬಂದದೆ. ಬಾ, ಅಲ್ಲಿ ಜೋತಾಡನ ಗಾಳಿ ಜೋರಾಗಿ ಬೀಸ್ತದೆ..." ಎಂದು ಹುಮ್ಮಸ್ಸಿನಿಂದ ನನ್ನನ್ನೂ ಎಳೆದುಕೊಂಡೇ ಹೋಗುತ್ತಿದ್ದ. ಇಂಥಾ ಸಮಯದಲ್ಲೇ ಇದ್ದಿರಬೇಕು, "ಒಳ್ಳೆ ಜೋತಪ್ಪ ನೀನು" ಎಂದು ನಾನೊಮ್ಮೆ ಥಟ್ಟನೆ ಹೇಳಿಬಿಟ್ಟಿದ್ದೆ. ಅದು ಅವನಿಗೆ ಮಹದಾನಂದವಾಗಿ ಕಣ್ಣರಳಿಸಿಕೊಂಡು, ''ಅನಂತು ನನ್ನ ನೀನು ಇನ್ಮುಂದೆ ಹಾಂಗೇ ಕರೆಯೋ... ಜೋಗಪ್ಪನಿಗಿಂತ ಜೋತಯ್ಯ ಚೆನ್ನಾಗಿದೆ'' ಎಂದಾಗ ನನಗೂ ಅದೇನೋ ಖುಶಿಯೆನಿಸಿ ಹಾಗೇ ಕರೆಯತೊಡಗಿದ್ದೆ. ಮುಂದೆ ನನ್ನ ಕಡೆಯಿಂದ ಅದೇ ಹೆಸರು ಅವನಿಗೆ ಕಾಯಂ ಆಗಿಬಿಟ್ಟಿತ್ತು.

ಪ್ರೈಮರಿಯ ನಂತರ ಅಪ್ಪಯ್ಯ ನನ್ನನ್ನು ಪೇಟೆಯಲ್ಲಿದ್ದ ಮಾವನ ಮನೆಯಲ್ಲಿಟ್ಟು ಒಳ್ಳೆಯ ಸ್ಕೂಲಿಗೆ ಸೇರಿಸಿಬಿಟ್ಟಿದ್ದ. ಆದರೆ ಜೋಗಪ್ಪ ಏಳನೇ ಕ್ಲಾಸಿನಲ್ಲಿ ಡುಮ್ಕಿ ಹೊಡೆದು ಮತ್ತೆ ಓದುವ ಆಸಕ್ತಿ ತೋರಿಸದೇ ನಮ್ಮ ಮನೆಯ ಆಳಾಗಿ ಕಾಯಂ ಆಗಿಬಿಟ್ಟಿದ್ದ. ಆದರೆ ಒಂದು ಕಾಲದಲ್ಲಿ ಏಕವಚನದಲ್ಲಿದ್ದ ನಮ್ಮಿಬ್ಬರ ಸ್ನೇಹ ಸಂಬಂಧ ಅದ್ಯಾವಾಗ ಹೇಗೆ ಅನಂತಪ್ಪ ಎಂಬ ಮರ್ಯಾದೆಗೆ ಮಾರ್ಪಾಟಾಯಿತೋ ಕಾಣೆ. ಹಾಗೆಂದು ನಾನು ಮಾತ್ರ ಸಿಕ್ಕಾಗೆಲ್ಲಾ ಜೋತಪ್ಪ ಎಂದು ಕರೆಯುವುದನ್ನು ಮಾತ್ರ ಬಿಟ್ಟಿರಲಿಲ್ಲ. ಓದು ಮುಗಿದ ಮೇಲೆ ನೌಕರಿಗೆಂದು ದೂರದ ಮಂಗಳೂರನ್ನು ಸೇರಿ, ವಾರಿಜ ನನ್ನ ಪತ್ನಿಯಾಗಿ ಮನೆದುಂಬಿ, ಮಗಳು ಶಾರ್ವರಿ ಹುಟ್ಟಿ, ಊರು ದೂರವಾಗಿ, ಜೋತಪ್ಪನ ಭೇಟಿಯೂ ಕಡಿಮೆಯಾಗಿಬಿಟ್ಟಿತ್ತು. ಆದರೆ ಅಂದು... ಆ ದಿನ ಆತ ನನ್ನ ಅಪ್ಪನ ಬಳಿ ರಜೆ ಕೇಳಿ ಹೋದ ಮರು ದಿವಸವೇ ನಡೆದಿದ್ದ ಆ ಒಂದು ವಿಶಿಷ್ಟ ಘಟನೆ ಮಾತ್ರ ಮನದೊಳಗೆ ಅದೆಷ್ಟು ಆಳವಾಗಿ ಹೂತುಹೋಗಿದೆ ಎಂಬುದಕ್ಕೆ ಇಂದೂ ನನಗೆ ಆತ ಹೀಗೆ ನೆನಪಾಗುತ್ತಿರುವುದೇ ಸಾಕ್ಷಿ! ಈಗಲೂ ಆ ಪ್ರಸಂಗವನ್ನು ನೆನೆದು ನನ್ನ ಮನಸು ಒದ್ದೆಯಾಗಿಬಿಡುತ್ತದೆ. ಆಶ್ಚರ್ಯವೆಂದರೆ ಈಗೊಂದು ವರುಷದಿಂದ ಅವನಾಗಲೀ, ಆ ದಿವಸ ನಡೆದಿದ್ದ ಆ ಅಪೂರ್ವ ಘಟನೆಯಾಗಲೀ